ಶ-72-(161)

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಇವರು ನಿಯಮ 72 ರಡಿಯಲ್ಲಿ ಪ್ರಸ್ತಾಪಿಸಿರುವ ಸೂಚನೆ.**

**ವಿಷಯ**

ರಾಜ್ಯ ಸರ್ಕಾರ ಅನುದಾನಿತ ಪದವಿ ಕಾಲೇಜುಗಳಲ್ಲಿ ಹಾಗೂ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ದೈಹಿಕ ಶಿಕ್ಷಣ ನಿರ್ದೇಶಕರು ಹಾಗೂ ಗ್ರಂಥಪಾಲಕರ ಹುದ್ದೆಗಳನ್ನು 2008 ರಿಂದ ತುಂಬಿಕೊಂಡಿರುವುದಿಲ್ಲ.

ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಭರ್ತಿ ಪ್ರಕ್ರಿಯೆಯ ಜೊತೆಗೆ ದೈಹಿಕ ಶಿಕ್ಷಣ ನಿರ್ದೇಶಕರ ಹಾಗೂ ಗ್ರಂಥಪಾಲಕರ ಹುದ್ದೆಗಳ ನೇಮಕಾತಿಗೂ ಅಧಿಸೂಚನೆ ಹೊರಡಿಸಬೇಕಾಗಿತ್ತು. ದೈಹಿಕ ಶಿಕ್ಷಣ ನಿರ್ದೇಶಕರು ಹಾಗೂ ಗ್ರಂಥಪಾಲಕರ ಹುದ್ದೆಗಳು ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಸರಿಸಮಾನವಾದ ಹುದ್ದೆಗಳಾಗಿದ್ದು, ಈ ಹುದ್ದೆಗಳಿಗೆ ನೇಮಕಾತಿ ಮಾಡದೇ ಇರುವುದರಿಂದ ಕ್ರೀಡಾ ಚಟುವಟಿಕೆಗಳಿಗೆ ಹಾಗೂ ಗ್ರಂಥಾಲಯ ಚಟುವಟಿಕೆ ಸಮಂಜಸವಾಗಿ ನಡೆಯುವಂತಾಗಬೇಕಾದರೆ ಖಾಲಿ ಇರುವ ಈ ಹುದ್ದೆಗಳ ನೇಮಕಾತಿ ಕೂಡಲೇ ಅಧಿಸೂಚನೆ ಹೊರಡಿಸಲು ಅಗತ್ಯ ಕ್ರಮ ಕೈಗೊಳ್ಳುವ ಕುರಿತು.

**ಸರ್ಕಾರದ ಹೇಳಿಕೆ**

**ಕಾಲೇಜು ಶಿಕ್ಷಣ**

ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ದಿನಾಂಕ:31.12.2015ರ ವರೆಗೆ ವಿವಿಧ ಕಾರಣಗಳಿಂದ ತೆರವಾಗಿರುವ ಬೋಧಕರ ಹುದ್ದೆಗಳನ್ನು (ಗ್ರಂಥಪಾಲಕರು ಮತ್ತು ದೈಹಿಕ ಶಿಕ್ಷಣ ನಿರ್ದೇಶಕರ ಹುದ್ದೆಗಳೂ ಒಳಗೊಂಡಂತೆ) ಕೆಲವೊಂದು ಷರತ್ತಿಗೊಳಪಟ್ಟು ಭರ್ತಿ ಮಾಡಲು ಸರ್ಕಾರದ ಪತ್ರ ಸಂಖ್ಯೆ: ಇಡಿ/240/ಯುಪಿಸಿ/2014, ದಿನಾಂಕ: 01.09.2017ರಲ್ಲಿ ಸರ್ಕಾರವು ಸಹಮತಿಸಿದೆ. ಆಡಳಿತ ಮಂಡಳಿಗಳಿಂದ ಆಯ್ಕೆ ಸಮಿತಿ ಮೂಲಕ ಖಾಲಿ ಇರುವ ಹುದ್ದೆಗಳಿಗೆ ನಿಯಮಾನುಸಾರ ನೇಮಕಾತಿ ಮಾಡಿಕೊಂಡು ಆಯುಕ್ತರ ಮೂಲಕ ಸರ್ಕಾರಕ್ಕೆ ಬಂದ ಪ್ರಸ್ತಾವನೆಗಳಿಗೆ ನಿಯಮಾನುಸಾರ ಪರಿಶೀಲಿಸಿ ಅನುಮತಿ ನೀಡಲಾಗುತ್ತಿದೆ.

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ಗ್ರಂಥಪಾಲಕರ ಮತ್ತು ದೈಹಿಕ ಶಿಕ್ಷಣ ನಿರ್ದೇಶಕರ ಖಾಲಿ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಕಡತ ಸಂಖ್ಯೆ:ಇಡಿ 337 ಯುಇಸಿ 2014ನ್ನು ದಿನಾಂಕ:10-12-2019 ರಂದು ಆರ್ಥಿಕ ಇಲಾಖೆಗೆ ಸಹಮತಿಗಾಗಿ ಕಡತ ಕಳುಹಿಸಲಾಗಿರುತ್ತದೆ. ಆರ್ಥಿಕ ಇಲಾಖೆಯಿಂದ ಸಹಮತಿ ದೊರೆತ ನಂತರ ನೇಮಕಾತಿ ಮಾಡಿಕೊಳ್ಳಲು ಕ್ರಮವಹಿಸಲಾಗುವುದು.

ಮುಂದುವರೆದು, ಖಾಸಗಿ ಅನುದಾನಿತ ಕಾಲೇಜುಗಳಿಗೆ ಸಂಬಂಧಿಸಿದಂತೆ ಒಟ್ಟು 44 ಗ್ರಂಥಪಾಲಕರ ಹಾಗೂ 53 ದೈಹಿಕ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಲಾಗಿದೆ. ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಖಾಲಿ ಇರುವ 185 ಗ್ರಂಥಪಾಲಕರ ಹುದ್ದೆಯ ಪ್ರಭಾರವನ್ನು ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಗ್ರಂಥಾಲಯ ನಿರ್ವಹಣೆಯ ಹಿತದೃಷ್ಟಿಯಿಂದ ಆಯಾ ಕಾಲೇಜುಗಳಲ್ಲಿನ ದೈಹಿಕ ಶಿಕ್ಷಣ ಬೋಧಕರು / ಸಹಾಯಕ ಪ್ರಾಧ್ಯಾಪಕರುಗಳಿಗೆ ವಹಿಸಲಾಗುತ್ತಿದೆ.

## ವಿಶ್ವವಿದ್ಯಾಲಯ

ರಾಜ್ಯದ 19 ವಿಶ್ವವಿದ್ಯಾಲಯಗಳಿಗೆ ಮಂಜೂರಾದ/ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಗ್ರಂಥಪಾಲಕ ಮತ್ತು ಸಹಾಯಕ ಗ್ರಂಥ ಪಾಲಕ ಹುದ್ದೆಗಳ ವಿವರ ಈ ಕೆಳಕಂಡಂತಿದೆ

| ಕ್ರ ಸಂ | ವಿಶ್ವವಿದ್ಯಾಲಯದ ಹೆಸರು | ಗ್ರಂಥಪಾಲಕರು | | | ಸಹಾಯಕ ಗ್ರಂಥಪಾಲಕರು | | |
|---|---|---|---|---|---|---|---|
| | | ಮಂಜೂರಾದ ಹುದ್ದೆ | ಭರ್ತಿಯಾಗಿರುವ ಹುದ್ದೆ | ಖಾಲಿಯಿರುವ ಹುದ್ದೆ | ಮಂಜೂರಾದ ಹುದ್ದೆ | ಭರ್ತಿಯಾಗಿರುವ ಹುದ್ದೆ | ಖಾಲಿಯಿರುವ ಹುದ್ದೆ |
| 1 | ಬೆಂಗಳೂರು ವಿಶ್ವವಿದ್ಯಾಲಯ | 01 | – | 01 | 11 | 02 | 09 |
| 2 | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ | 01 | – | 01 | – | – | – |
| 3 | ಬೆಂಗಳೂರು ಉತ್ತರ ವಿಶ್ವವಿದ್ಯಾಲಯ | 01 | – | 01 | – | – | – |
| 4 | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ | 01 | 01 | – | 02 | 01 | 01 |
| 5 | ಗುಲ್ಬರ್ಗಾ ವಿಶ್ವವಿದ್ಯಾಲಯ | 01 | – | 01 | 13 | 04 | 09 |
| 6 | ದಾವಣಗೆರೆ ವಿಶ್ವವಿದ್ಯಾಲಯ | 02 | 01 | 01 | 03 | 01 | 02 |
| 7 | ಮಂಗಳೂರು ವಿಶ್ವವಿದ್ಯಾಲಯ | 01 | – | 01 | 04 | 02 | 02 |
| 8 | ಕರ್ನಾಟಕ ವಿಶ್ವವಿದ್ಯಾಲಯ | 01 | – | 01 | 31 | 01 | 30 |
| 9 | ಕುವೆಂಪು ವಿಶ್ವವಿದ್ಯಾಲಯ | 01 | – | 01 | 09 | 07 | 02 |
| 10 | ತುಮಕೂರು ವಿಶ್ವವಿದ್ಯಾಲಯ | 01 | – | 01 | 03 | 03 | – |
| 11 | ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ | 01 | – | 01 | 02 | – | 02 |
| 12 | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ | 01 | – | 01 | – | – | – |
| 13 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯ | 01 | – | 01 | 01 | – | 01 |
| 14 | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ | 01 | – | 01 | 03 | 03 | – |
| 15 | ಕರ್ನಾಟಕ ಜಾನಪದ ವಿಶ್ವವಿದ್ಯಾಲಯ | 01 | – | 01 | 02 | – | 02 |
| 16 | ಮೈಸೂರು ವಿಶ್ವವಿದ್ಯಾಲಯ | 01 | – | 01 | 12 | 11 | 01 |
| 17 | ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ | 02 | – | 02 | 02 | – | 02 |
| 18 | ಕರ್ನಾಟಕ ಸಂಗೀತ ವಿಶ್ವವಿದ್ಯಾಲಯ | 01 | – | 01 | – | – | – |
| 19 | ಕನ್ನಡ ವಿಶ್ವವಿದ್ಯಾಲಯ | 01 | – | 01 | 04 | 03 | 01 |
| | ಒಟ್ಟು | 21 | 02 | 19 | 102 | 38 | 64 |

ರಾಜ್ಯದ 19 ವಿಶ್ವವಿದ್ಯಾಲಯಗಳಿಗೆ ಮಂಜೂರಾದ/ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ದೈಹಿಕ ಶಿಕ್ಷಣ ನಿರ್ದೇಶಕರ ಹುದ್ದೆಗಳ ವಿವರ ಈ ಕೆಳಕಂಡಂತಿದೆ

| ಕ್ರಸಂ | ವಿಶ್ವವಿದ್ಯಾಲಯದ ಹೆಸರು | ದೈಹಿಕ ಶಿಕ್ಷಣ ನಿರ್ದೇಶಕರು | | |
|---|---|---|---|---|
| | | ಮಂಜೂರಾದ ಹುದ್ದೆ | ಭರ್ತಿಯಾಗಿರು ವ ಹುದ್ದೆ | ಖಾಲಿಯಿರುವ ಹುದ್ದೆ |
| 1 | ಬೆಂಗಳೂರು ವಿಶ್ವವಿದ್ಯಾಲಯ | 01 | – | 01 |
| 2 | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ | ಹುದ್ದೆ ಮಂಜೂರಾಗಿರುವುದಿಲ್ಲ | | |
| 3 | ಬೆಂಗಳೂರು ಉತ್ತರ ವಿಶ್ವವಿದ್ಯಾಲಯ | ಹುದ್ದೆ ಮಂಜೂರಾಗಿರುವುದಿಲ್ಲ | | |

| | | | | |
|---|---|---|---|---|
| 4 | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ | 00 | 00 | 00 |
| 5 | ಗುಲ್ಬರ್ಗಾ ವಿಶ್ವವಿದ್ಯಾಲಯ | 01 | 00 | 01 |
| 6 | ದಾವಣಗೆರೆ ವಿಶ್ವವಿದ್ಯಾಲಯ | 01 | 01 | 00 |
| 7 | ಮಂಗಳೂರು ವಿಶ್ವವಿದ್ಯಾಲಯ | 01 | 00 | 01 |
| 8 | ಕರ್ನಾಟಕ ವಿಶ್ವವಿದ್ಯಾಲಯ | 01 | 00 | 01 |
| 9 | ಕುವೆಂಪು ವಿಶ್ವವಿದ್ಯಾಲಯ | 01 | 01 | 00 |
| 10 | ತುಮಕೂರು ವಿಶ್ವವಿದ್ಯಾಲಯ | 02 | 02 | 00 |
| 11 | ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ | 13 | 09 | 04 |
| 12 | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ | 01 | 00 | 01 |
| 13 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯ | 01 | – | 01 |
| 14 | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ | ಹುದ್ದೆ ಮಂಜೂರಾಗಿರುವುದಿಲ್ಲ | | |
| 15 | ಕರ್ನಾಟಕ ಜಾನಪದ ವಿಶ್ವವಿದ್ಯಾಲಯ | ಹುದ್ದೆ ಮಂಜೂರಾಗಿರುವುದಿಲ್ಲ | | |
| 16 | ಮೈಸೂರು ವಿಶ್ವವಿದ್ಯಾಲಯ | 07 | 02 | 05 |
| 17 | ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ | 03 | 02 | 01 |
| 18 | ಕರ್ನಾಟಕ ಸಂಗೀತ ವಿಶ್ವವಿದ್ಯಾಲಯ | ಹುದ್ದೆ ಮಂಜೂರಾಗಿರುವುದಿಲ್ಲ | | |
| 19 | ಕನ್ನಡ ವಿಶ್ವವಿದ್ಯಾಲಯ | ಹುದ್ದೆ ಮಂಜೂರಾಗಿರುವುದಿಲ್ಲ | | |

ಪ್ರಸ್ತುತ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಗ್ರಂಥಪಾಲಕ ಮತ್ತು ದೈಹಿಕ ಶಿಕ್ಷಣ ನಿರ್ದೇಶಕರ ಹುದ್ದೆಗಳನ್ನು ತ್ವರಿತವಾಗಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಇಡಿ 77 ಯುಪಿಸಿ 2020

**(ಡಾ: ಅಶ್ವಥ್ ನಾರಾಯಣ ಸಿ.ಎನ್.)**
ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)